**ಚಲನಚಿತ್ರ: ದಾರ:** Movie: Daara (The Thread)

**ಪಾತ್ರದಾರಿಗಳು:**

ಶಂಕರ್: ಹೂವನ್ನು ಮಾರುವವ;

ವಿಜಯಲಕ್ಷ್ಮಿ: ಶಂಕರನ ಹೆಂಡತಿ

ಹರೀಶ್ ಗೌಡ: ಶಂಕರನಿಗೆ ಸಾಲವನ್ನು ಕೊಟ್ಟವ

ಮಗು: ಶಂಕರ್ ಮತ್ತು ವಿಜಯಲಕ್ಷ್ಮಿಯ ಮಗು

ಮನೋಜ್: ಶಂಕರನ ಗೆಳಯ

Actors:

Shankar: Flower Vendor

Vijayalakshmi: Shankar’s wife

Harish Gowda: Money lender

Boy: Child of Shankar and Vijayalakshmi

Manoj: Shankar’s friend.

*ಸೀನ್ 1: ಸ್ಲಮ್/ಬೆಳಗ್ಗೆ/ಮನೆಯ ಒಳಗಡೆ*

*ಬೆಳಕು ಹರಿಯುತ್ತಿದೆ...ಹೊರಗಡೆ ಜನರು ಓಡಾಡುವ ಸದ್ದು...ಮಗು ಮಲಗಿದೆ; ಗೊರಕೆ ಹೊಡೆಯುತ್ತಿದ್ದ ಶಂಕರನು ಪಕ್ಕಕ್ಕೆ ತಿರುಗಿ ಹೆಂಡತಿಯ ಮೇಲೆ ಕೈ ಹಾಕಿದನು. ಆದರೆ ವಿಜಯಲಕ್ಷ್ಮಿಯು ಮೇಲಗಡೆ ಒಂದೇ ಸಮನೆ ನೋಡತಾಇದ್ದಾಳೆ. ಗಡಿಯಾರದ ಅಲಾರಾಂ ಸದ್ದು ಮಾಡಲು ಪ್ರಾರಂಬಿಸುತ್ತದೆ. ವಿಜಯಲಕ್ಷ್ಮಿಯು ಅಲಾರಾಂನ್ನು ಆಫ್ ಮಾಡಿ, ಶಂಕರನ ಕೈಯನ್ನು ಪಕ್ಕಕ್ಕೆ ಸರಿಸಿ ಎದ್ದು ಕೂದಲನ್ನು ಸರಿಮಾಡಿಕೊಂಡು ದೇವರಿಗೆ ಕೈಮುಗಿದು ಎದ್ದು ನಿಂತಳು.*

*ವಿಜಯಲಕ್ಷ್ಮಿ ಹಲ್ಲುಜ್ಜಿ ಮುಖ ತೊಳೆದು ಅಡಿಗೆ ಮನೆಗೆ ಬಂದು ತಿಂಡಿ ಮಾಡಲು ಪ್ರಾರಂಬಿಸಿದಳು. ತಿಂಡಿ ಮಾಡುತ್ತಲೇ ಬಾಗಿಲಿಗೆ ನೀರು ಹಾಕಿ ರಂಗೋಲಿ ಹಾಕಿ ದೇವರಿಗೆ ದೀಪ ಹಚ್ಚಿ ಕೈ ಮುಗಿದಳು. ಆ ಶಬ್ದಕ್ಕೆ ಗಂಡ ಶಂಕರ ಎದ್ದು ಮುಖ ತೊಳೆದು ಒಳಗೆ ಬಂದ. ವಿಜಯಲಕ್ಷ್ಮಿ ಮಗನನ್ನು ಎಬ್ಬಿಸಿದಳು ಆ ನಂತರ ತಿಂಡಿ ಮಾಡಿದಳು. ಮಗನ ಮುಖ ತೊಳೆದು ಮಗನಿಗೆ ತಿಂಡಿ ತಿನ್ನಿಸಿ ಅವನ ಸ್ಕೂಲಿನ ಬ್ಯಾಗನ್ನು ಸರಿಮಾಡಿ ಅವನಿಗೆ ಯೂನಿಫಾರಂನ್ನು ಹಾಕಿದಳು. ಮಗ ಬ್ಯಾಗನ್ನು ತೆಗೆದು ಕೊಂಡು ಸ್ಕೂಲಿಗೆ ಹೊರಟನು. ನಂತರ ಶಂಕರನಿಗೆ ತಿಂಡಿ ಕೊಟ್ಟು, ಹಿಂದಿನ ರಾತ್ರಿ ಕಟ್ಟಿದ್ದ ಹೂವನ್ನು ಒಂದು ದೊಡ್ಡ ಪ್ಲಾಸ್ಟಿಕ್ ಬ್ಯಾಗಿಗೆ ಹಾಕಿ ಗಂಡನಿಗೆ ಕೊಟ್ಟಳು. ಶಂಕರನು ಬ್ಯಾಗನ್ನು ಎತ್ತಿಕೊಂಡು ಹೊರಡುವಾಗ:*

*(ಈ ಕೆಲಸಗಳೆಲ್ಲವನ್ನು ಅನೇಕ ದಿನಗಳಿಂದ ಮಾಡುತ್ತಿದ್ದರಿಂದ ಸುಲಭವಾಗಿ ಮಾಡುತ್ತಿದ್ದಳು)*

Scene – 1

Location: Slum locality (Interior of home)

Time: Morning

*Start of the day marked by people bustling around, Sun getting brighter. Snoring Shankar turns towards placing his hand over her but vijaylakshmi is seriously staring at the roof. As the alaram starts ringing, she gently move the hand on her, switch off the alarm, gets off the bed, bow to god. Sets her disturbed hair to get started for the day.*

*Vijayalakshmi gets busy with her routine. She brushes her teeth, wash her face and gets into the kitchen to prepare morning breakfast. Simultaneously she lights the lamp in front of the diety.*

*Then Vijayalakshmi wakes up her son, give him a bath and get him the school uniform. Shankar gets off the bed and get fresh to start his day. Then Vijaylakshmi serves the breakfast to both. Then she hands over the school bag to her son and he leaves for the school. She then hands over the bag with garlands prepared the day before to Shankar.*

*(This is the daily routine of Vijaylakshmi and she is so good at multitasking. She does all this with so much of ease)*

**ವಿಜಯಲಕ್ಷ್ಮಿ**: ರೀ. . . .

ಶಂಕರ್ ಚಪ್ಪಲಿ ಮೆಟ್ಟುತ್ತಲೆ,

**Vijayalakshmi**: Ree……..

Shankar wearing his footwear about to leave

**ಶಂಕರ್**: ಏನೇ?

**Shankar**: Yeh… tell me

**ವಿಜಯಲಕ್ಷ್ಮಿ**: ಹಾ... ಅದು... ಮೂರನೇ ಮನೆ... ಪುಷ್ಪನ ಮಗನಿಗೆ ಹುಟ್ಟಿದ ಹಬ್ಬ ....ಅವನಿಗೆ ಏನಾದರು ಕೊಡಬೇಕೂಂತಾ ಅಂಗಡಿಗೆ ಹೋಗತಾ ಇದೀವಿ. ಅದಕ್ಕೆ.....

**Vijayalakshmi:** Today is the birthday of Pushpa's son, they who stay at the third house from here.

*Shankar lashes out and gets irritated.*

**ಶಂಕರ್**: ಅದಕ್ಕೆ (ಕೋಪ)

ಶಂಕರ್ ಚಪ್ಪಲಿಯನ್ನು ಮಟ್ಟಿ ಬ್ಯಾಗನ್ನು ಎತ್ತಿಕೊಂಡು ಹಾಗೆ ನಿಂತುಕೊಂಡ.

**Shankar**: So, What?

*Shankar who is about to leave with the bag stops. Vijayalakshmi says hesitantly.*

**ವಿಜಯಲಕ್ಷ್ಮಿ**: 50 ರೂಪಾಯಿ ಬೇಕಿತ್ತು (ಮಾತನಾಡಲು ಹಿಂಜರಿಕೆ)

**Vijayalakshmi**: I wanted 50 Rs. To buy a gift for the kid

**ಶಂಕರ್**: ಅದಕ್ಕೆಲ್ಲ ನೀನ್ಯಾಕೆ ಹೋಗತೀಯ ನಾನೆ ಮಾರ್ಕಟ್‌ನಲ್ಲಿ ಏನಾದರು ಸಿಕ್ಕರೆ ತರತೀನಿ ಎಂದು ಹೇಳುತ್ತಲೆ ಆಚೆಗೆ ಹೊರಟ.

*(ವಿಜಯಲಕ್ಷ್ಮಿ ಹಾಗೆಯೇ ಬಾಗಿಲಿನ ಮೇಲೆ ಕೈ ಯಿಟ್ಟು ತಲೆಯನ್ನು ಬಾಗಿಲಿಗೆ ಒರಗಿಸಿ ಗಂಡನನ್ನೇ ನೋಡುತ್ತಾ ನಿಂತಳು (ನೀರಸ ಮೌನ)*

**Shankar:** Why should you go for that? I will get something for him from the market.

*Vijayalakshmi leans over the door frame and see Shankar leaving.*

(SILENCE)

***

*ಸೀನ್ 2: ಹೂವು ಮಾರುವವರು/ ಹೂವನ್ನು ಕೊಂಡುಕೊಳ್ಳುವ ಜನ / ಎಲ್ಲೆಲ್ಲೂ ಹುಮಾರುವ/ಕೊಳ್ಳುವ ಗಲಾಟೆ*

Scene 2: Market place, noise of people selling and buying

***ಹೂವು ಮಾರುವವರು:*** *ಬನ್ನಿ ಹೂವು ತೊಗೊಳ್ಳಿ, ಮಾರಿಗೆ ಬರೀ 50 ರೂಪಾಯಿ, ಎಲ್ಲಿಯೂ ನಿಮಗೆ ಸಿಗೋಲ್ಲ; ಅಕ್ಕ, ಅಣ್ಣ ಬನ್ನಿ ಹೂವು ತೊಗೊಳ್ಳಿ... ಹೇ ತಮ್ಮ ಬಾರೋ ಹೂವು ತಗೋಳೋ ದೇವರಿಗೆ ಹಾಕು....ಪರೀಕ್ಷೆಯಲ್ಲಿ ಪಾಸಾಗತೀಯ... (ಇಡೀ ಮಾರುಕಟ್ಟೆ ಯಲ್ಲಿ ಹೂವು ಮಾರುವವರ ಧ್ವನಿ, ಕೊಳ್ಳುವವರ ಧ್ವನಿ ಕೇಳುತ್ತಾ ಇರುತ್ತದೆ.........*

*ಶಂಕರನು ಹೂವನ್ನು ಇಟ್ಟುಕೊಂಡು ಕುಳಿತಿದ್ದಾನೆ; ಶಂಕರನು ಹೂವನ್ನು ನೋಡುತ್ತಾ ಇರುತ್ತಾನೆ*

*(ವ್ಯಾಪಾರಿ ಒಬ್ಬರು ಬ್ಯಾಗ್ ತೆಗೆದುಕೊಂಡು ಶಂಕರನ ಹತ್ತಿರ ಹೂ ಕೊಂಡುಕೊಳ್ಳಲು ಬಂದರು)*

**Flower Vendors**: Come, come… just Rs 50 per meter… you want find it any where… Oh brother… buy here and offer it to God… Definitely you will pass in your exam

*Shankar waits for customers to buy his flowers and a customer walk in, asks checking the quality*

**ವ್ಯಾಪಾರಿ**: ಎಷ್ಟಪ್ಪ ಮಾರು?

*(ಕೆಳಗಡೆ ಮುಖ ಮಾಡಿದ್ದ ಶಂಕರನು ನಿದಾನಕ್ಕೆ ತಲೆ ಎತ್ತಿ ಅವರ ಕಡೆ ನೋಡಿದನು)*

**Customer:** How much for a meter (Maaru)?

*(Shankar looking down at the flowers stared at the customer and said)*

**ಶಂಕರ್**: ಒಂದು ಮಾರಿಗೆ 150 ರೂಪಾಯಿ ಸ್ವಾಮಿ

*(ವ್ಯಾಪಾರಿ ಹೂವನ್ನು ಮುಟ್ಟಿ ನೋಡುತ್ತಾ ಹೂವಿನ ಗುಣಮಟ್ಟವನ್ನು ಪರೀಕ್ಷಿಸುತ್ತಿದ್ದನು. ಶಂಕರನು ಹೇಳಿದ ಬೆಲೆಯನ್ನು ಕೇಳಿದ ತಕ್ಷಣ ತಲೆ ಎತ್ತಿ ಶಂಕರನ ಮುಖವನ್ನು ನೋಡಿದನು)*

*The customer gets shocked hearing the price.*

**ವ್ಯಾಪಾರಿ**: ಏನು...(ಆಶ್ಚರ್ಯ)

**Customer**: What..?

**ಶಂಕರ್**: ಮಾರಿಗೆ 150ರೂ ಮೊಳಕ್ಕೆ 50 ರೂಪಾಯಿ ಎಂದು ತೀಕ್ಷ್ಣವಾಗಿ ಹೇಳಿದನು

**Shankar:** Yes Rs. 150 / meter and Rs 50/ yard

**ವ್ಯಾಪಾರಿ**: ಪಕ್ಕದಲ್ಲೇ 100 ರುಪಾಯಿಗೆ ಕೊಡುತ್ತಿದ್ದಾರೆ, ನೀನ್ಯಾಕಪ್ಪ 150 ರುಪಾಯಿ ಹೇಳುತ್ತಿದ್ದೀಯ?

**Customer**: Vendor next to you is selling at Rs 100/meter. Then why are you selling at Rs 150 / meter?

**ಶಂಕರ್**: ಬೇರೆಯವರದೆಲ್ಲ ನನಗೆ ಗೊತ್ತಿಲ್ಲ ಸ್ವಾಮಿ, ನಾನು ಇಷ್ಟೇ ಮಾರೋದು...ಬೇಕಾದರೆ ತೊಗೊಳ್ಳಿ ಇಲ್ಲಾಂದರೆ ಜಾಗ ಖಾಲಿ ಮಾಡಿ...

**Shankar**: I am not bothered at what price others sell sir. This is my selling price. Buy it if you want, else get lost. Customer murmurs for the rudeness of Shankar

**ವ್ಯಾಪಾರಿ**: ಗೊಣಗುತ್ತಾ ಬೆಳಗ್ಗೆ ಬೆಳಗೆ ಇವನಂತವನ ಸಹವಾಸ ಆಯ್ತಪ್ಪ ತೂ...ನನ್ನ ಕರ್ಮ...

ಶಂಕರ್ ವ್ಯಾಪಾರಿಯನ್ನೇ ನೋಡುತ್ತಾ, ಹೂವಿನ ಕೆಳಗಡೆ ನೋಡುತ್ತಾ ಇದ್ದ ಕಾಯಿನ್‌ಗಳನ್ನು ಜೇಬಿಗೆ ಹಾಕಿ ಅಲ್ಲೇ ಇದ್ದ ಬಾಟಲನ್ನು ಬಿಸಾಕಿ ಹೂವನ್ನು ನೀರಸದಿಂದ ಪ್ಯಾಕ್ ಮಾಡಿದನು.

**Customer**: Hell with this man…… My fate I met this person early morning.

*Shankar stares at the customer, pack the flowers and leaves the place pocketing sales proceeds of the day.*

***

*ಸೀನ್ 3: ಸಂಜೆ ಬಾರಿನಲ್ಲಿ ಶಂಕರ್ ಮತ್ತು ಅವನ ಸ್ನೇಹಿತ ಮನೋಜ್ ಚೇರ್ ಮೇಲೆ ಕೂತುಕೊಂಡು ಕುಡಿಯುವ ದೃಶ್ಯ*

Scene 3: Bar; Shankar and his friend Manoj drinking in bar.

**ಮನೋಜ್**: ನೀನು ಏನೇ ಹೇಳ ಮಗ, ಆ ನನ್ನ ಮಗ ಮಂಜುಗೆ ಆಗಬೇಕಾಗಿದ್ದೇ...

*(ಶಂಕರ್ ಮನೋಜನ ಮುಖ ನೋಡುತ್ತಾ ಒಂದು ಸಿಪ್‌ನ್ನು ಹೀರಿದನು)*

**Manoj**: Dude whatever you say, this should have happened to Manju.

*Shankar takes a sip staring at Manoj.*

**ಮನೋಜ್**: ಎಲ್ಲಾರು ಹೇಳದ್ವಿ..ನಮ್ಮ ಮಾತು ಕೇಳಿದ್ರೆ ಎಲ್ಲಾ ಸರಿಹೋಗತಿತ್ತು... ಹೋಗಿ ಹೋಗಿ ದೇವರು/ದಿಂಡ್ರು ಅಂತ ಹೋದ... ಹೀಗ ಗೋತ ಹೊಡೆದ...

*(ಶಂಕರ್ ಅನಾಸಕ್ತಿಯಿಂದ ಮುಗುಳ್ನಕ್ಕ ; ಮನೋಜ್ ಶಂಕರನ ಮುಖವನ್ನೇ ನೋಡುತ್ತಾ ಸಿಪ್ ಹೀರಿದ)*

**Manoj**: He should have listened to our advice but relied on god and stuff… just got doomed.

*Shankar stays uninterested takes another sip.*

**ಮನೋಜ್**: ಯಾಕ್ ಗುರು ಏನಾಯಿತು? ಅವಾಗಿಂದ ನಾನೆ ಮಾತನಾಡತಾ ಇದೀನಿ?

**Manoj**: Come on dude… I am going on … but you not al all here? Why what is the matter?

**ಶಂಕರ್**: ಏನಿಲ್ವೋ...ಅದೇ ಮಾರ್ಕೆಟ್...ಅದೇ ಹೂವ...ಎಲ್ಲಾ ಅಂಗೆ ಇದೆ ಏನೂ ಬದಲಾಗಿಲ್ಲ...

**Shankar**: Nothing dude… the same market, the same flower selling hustle… All as it was… nothing has changed.

**ಮನೋಜ್**: ಹೋ...ಬದಲು ಅಂದಾಗ ನೆನಪಾಯ್ತು ನಿನಗೆ ಗೊತ್ತೇನೋ ಹೊಸ ಸ್ಕೀಮ್ ಬಂದಿದೆ?

**Manoj**: Hey… Now I remember when you said "Nothing has changed". A new scheme has been launched.

**ಶಂಕರ್**: ಯಾವ ಸ್ಕೀಮೋ?

**Shankar**: Is it? What is that?

**ಮನೋಜ್**: ಶಕ್ತಿ ಸ್ಕೀಮ ಕಣೋ...ಹೆಂಗಸರಿಗೆಲ್ಲ ಫ್ರೀ ಬಸ್...ಎಲ್ಲಿಂದ ಎಲ್ಲಿಗ ಬೇಕಾದ್ರು ಹೋಗಬೋದು ಗುರು...

ಕ್ಯಾಮರಾ ಫ್ರೇಮ್‌ನಲ್ಲಿ ಬರೀ ಶಂಕರನ ಮುಖ ಕಾಣುವಿಕೆ (ಶಂಕರನ ಗಾಢ ಆಲೋಚನೆಯ ಚಿಂತಾತ್ಮಕ ಮುಖ)

**Manoj**: It is the "SHAKTI SCHEME" man…. It is all free for all ladies. Ladies can travel totally for free.

*(Camera portrays Shankar's face in a pensive mood)*

**ಮನೋಜ್**: ಇಷ್ಟೆಲ್ಲಾ ಸರ್ಕಾರ ಮಾಡದರೂ...ಅದು ಏನದು...ಹಾ...ವುಮೆನ್ ಎಂಪವರ್ಮೆಂಟ್... ಅವರು ಏನೇ ಕಿತ್ತಕೊಂಡ್ರುನೂ ನಮ್ಮ ಹೆಂಗಸರನ್ನ ನಮ್ಮ ಕಂಟ್ರೋಲ್‌ನಿಂದ ಕಿತ್ತಕೊಳ್ಳೋಕೆ ಆಗಲ್ಲ...ಅಲ್ವಾ ಮಗ...(ಮನೋಜ್ ಶಂಕರನ ಕೈಗೆ ಚಪ್ಪಾಳೆ ಹೊಡೆಯಲು ಕೈಚಾಚಿದನು)

*ಗಾಢ ಆಲೋಚನೆಯಲ್ಲಿದ್ದ ಶಂಕರನು ಮನೋಜನ ಮಾತು ಕೇಳುತ್ತಾ ಸಿಪ್‌ನ್ನು ಹೀರುತ್ತಾ ನಗುತ್ತಾ ಮುಂದೆ ಚಾಚಿದ ಮನೋಜನ ಕೈಯನ್ನು  ಹೊಡೆದನು ಹಾಗೆ, ಬೇರೆ ಕೈಯಲ್ಲಿ ಗ್ಲಾಸನ್ನು ಮನೋಜನ ಗ್ಲಾಸಿಗೆ ತಾಗಿಸಿ ಚಿಯರ್ಸ್ ಎಂದನು.*

**Manoj:** No matter what all the government do in the name of women empowerment no one can snatch the control we have over them, right? (Manoj advances towards Shankar for a Hifi)

*Shankar in a deep thought takes another sip and with a Hifi, touched his glass with that of Manoj's and says CHEERS.*

***

*ಸೀನ್ 4: ಮನೆ; ರಾತ್ರಿ*

*ಮನೆಯಲ್ಲಿ ಹಾಸಿಗೆ ಹಾಸಿದೆ ಅದರ ಪಕ್ಕದಲ್ಲಿ ವಿಜಯಲಕ್ಷ್ಮಿಯ ಮಗ ಮನೆಗಲಸ ಬರೆಯುತ್ತಿದ್ದಾನೆ ; ಒಂದೇ ಒಂದು ಲೈಟು ಉರಿಯುತ್ತಿತ್ತು. ಶಂಕರನು ಮಾಮೂಲಿನಂತೆ ಕುಡಿದು ತೂರಾಡುತ್ತಾ ಮನೆಗೆ ಬಂದನು...*

Scene 4: Night; bedroom

*It is late night. Vijayalakshmi has made the bed. Just one light is on in the whole house. Vijayalakshmi's son doing his homework.*

*As usual Shankar fully drunk enters the house.*

**ವಿಜಯಲಕ್ಷ್ಮಿ:** ನೀನು ಹೋಂ ವರ್ಕ್ ಮುಗಿಸು ನಾನು ನಿಮ್ಮಪ್ಪನಿಗೆ ಊಟಬಡಿಸಿ ಬರುತ್ತೇನೆ ಎಂದು ಎದ್ದು ನಿಂತಳು

*ವಿಜಯಲಕ್ಷ್ಮಿ ಶಂಕರನ ಕೈಯಲ್ಲಿ ಇದ್ದ ಹೂವಿನ ಬ್ಯಾಗನ್ನ ಇಸಿದುಕೊಂಡಳು ಅದನ್ನು ಮೂಲೆಯಲ್ಲಿ ಇಟ್ಟಳು*

**Vijayalakshmi:** You complete your homework. Let me serve the dinner to your dad.

*Vijayalakshmi gets the flower bag off his husband and place it in a corner.*

**ವಿಜಯಲಕ್ಷ್ಮಿ**: ರೀ ಉಡುಗೊರೆ ತಂದರಾ?

*ಶಂಕರ್ ನಿದಾನಕ್ಕೆ ಶರ್ಟಿನ ಬಟನ್ ಅನ್ನು ಬಿಚ್ಚುತ್ತಾನೆ*

**Vijayalakshmi:** Did you get the gift?

*Slowly Shankar manages himself to take off his shirt.*

**ಶಂಕರ್**: ಅಲ್ಲ ನಾನು ಬೆಳಗ್ಗೆ ಹೋಗಿ ಕೆಲಸಮಾಡಕೊಂಡು ಬರತೀನಿ…ಮನೆಗೆ ಬಂದ ನನಗೆ ಒಂದು ಗ್ಲಾಸ್ ನೀರು ಕೊಟ್ಟಿಲ್ಲ… ನಿನಗೆ ಉಡುಗೊರೆ ಬೇಕಾ?

**Shankar**: I came home after a long day of work and you didn't even offer a glass of water. Do you want gift? (Shouts)

**ವಿಜಯಲಕ್ಷ್ಮಿ**: ಅಲ್ಲಾ… ಬಿಡಿ…ಬನ್ನಿ ಊಟ ಮಾಡಿ ಎಂದು ಮುಂದೆ ನಡೆದಳು

**Vijayalakshmi:** Leave it… It is okay… Come down for dinner.

*ಶಂಕರ್ ಶರ್ಟ್‌ನ್ನು ಬಿಚ್ಚಿ ಬನಿಯನ್‌ನಲ್ಲಿಯೇ,*

*Shankar still on his banian*

**ಶಂಕರ್**: ಏನ್ ಸಾರು ಮಾಡಿದಿಯಾ?

**Shankar:** What is the curry?

**ವಿಜಯಲಕ್ಷ್ಮಿ:** ಬೇಳೆ ಸಾರು.

**Vijayalakshmi**: Dal Sambar

**ಶಂಕರ್**: ಯಾವಗ್ ನೋಡದರೂ ಬೇಳೆ ಸಾರು ಮಾಡತಿರತೀಯ. ಚಿಕನ್ ಸಾರು, ಉಪ್ಪ ಸಾರು ಮಾಡೋದೇ ಇಲ್ಲ.

**Shankar**: I am fed up with this Daal Sambar. Why don't you prepare something spicy stuff?

*ಶಂಕರನು ಮಗುವಿನ ಮುಖ ನೋಡುವನು, ಮಗು ಶಂಕರನ ಮುಖ ನೋಡುತ್ತಾ ಇರುತ್ತದೆ*

**ಶಂಕರ್**: ಏನ್ ಮುಖ–ಮುಖ ನೋಡತಾ ಇದೀಯಾ?

*Shankar comes to know the child watching them and lashes at him.*

**Shankar**: What are you looking at me?

*ವಿಜಯಲಕ್ಷ್ಮಿ ಮಗುವಿನ ಕಡೆಗೆ ತಿರುಗಿ, ಕಾಲಿನ ಬೆರಳನ್ನು ಭಯದಿಂದ ಮಡಿಚಿದಳು.*

*Vijayalakshmi turns at her son and signals him to retrieve.*

**ವಿಜಯಲಕ್ಷ್ಮಿ**: ಸುಮ್ಮನೆ ನೀನು ಓದಕೋ ಹೋಗು.

**Vijayalakshmi:** Go-get back. Do your homework.

**ಶಂಕರ್**: ನೀವಿಬ್ಬರು ಚೆನ್ನಾಗಿ ತಿಂದು ಮಲಗಕೊಳ್ಳಿ... ನನಗೆ ಊಟನೂ ಬೇಡ ಗೀಟನೂ ಬೇಡ ಎಂದು ಮಲಗಲು ಹೊರಟನು.

*ವಿಜಯಲಕ್ಷ್ಮಿ ಪಾತ್ರೆಯನ್ನು ನೋಡಿ ಹೋಂ ವರ್ಕ್ ಮಾಡುತ್ತಾ ಇದ್ದ ಮಗನನ್ನು ನೋಡಿದಳು...ಮಗನು ಅವನ ಅಮ್ಮನನ್ನು ನೋಡುತ್ತಾ ಕುಳಿತನು.*

**Shankar:** You both eat. I don't want it. Shankar departs to the bedroom.

*Vijayalakshmi looks at the food and at her son. Child keeps looking at her mother*.

***

*ಸೀನ್ 5: ಮಾರನೆಯ ದಿನ ಬೆಳಗ್ಗೆ; ಮನೆಯ ಒಳಗೆ*

*ವಿಜಯಲಕ್ಷ್ಮಿ ಅಡಿಗೆ ಮಾಡುತ್ತಾ ಇದ್ದಾಗ ಮನೆಆಚೆ ಯಾರೋ ಜೋರಾಗಿ ಮಾತನಾಡುವುದು ಕೇಳಿಸುವುದು; ವಿಜಯಲಕ್ಷ್ಮಿಯು ಮನೆಯ ಆಚೆ ಕತ್ತನ್ನು ತಿರುಗಿಸಿದಳು*

*ಮನೆಯ ಅಂಗಳ ; ಹರೀಶ್ ಗೌಡ (ಸಾಲ ವಸೂಲಾತಿ ಮನುಷ್ಯ) ಮತ್ತು ಅವನ ಜೊತೆಗೆ ಇಬ್ಬರು ಮನುಷ್ಯರು ನಿಂತು ಜೋರಾಗಿ ಮಾತನಾಡುತ್ತಿರುತ್ತಾರೆ ; ಅವರ ಎದುರಿಗೆ ಶಂಕರನು ನಿಂತಿರುತ್ತಾನೆ*

Scene 5: The next day; Interior of the house

**Vijayalakshmi:** Preparing food in the kitchen ears some loud conversation in the outdoors.

*Shankar is standing in front of Harish gowda, the money lender with his two men shouting at him.*

**ಹರೀಶ್ ಗೌಡ**: ಎಷ್ಟು ದಿನ ಅಂತ ಕಾಯಬೇಕೋ? ಸಾಲ ತಗೊಳ್ಳುವಾಗ ನಮ್ಮ ಹತ್ತಿರ ಎಲ್ಲಿದ್ದರೂ ಹುಡಿಕಿಕೊಂಡು ಬಂದು ಬಿಡುತ್ತೀರಾ? ಸಾಲ ತೀರಸವಾಗ ಮಾತ್ರ ನಾವು ನಿಮ್ಮ ಮನೆ ಹತ್ತಿರ ಅಲೀಬೇಕಾ?

**Harish Gowda**: How long should I wait for you to get my money back? You people come in search of money. Should I come to your place to collect it?

**ಶಂಕರ್**: ಅಣ್ಣ... ಮನೆ ಮುಂದೆ ಗಲಾಟೆ ಮಾಡತಾ ಇದೀರಾ? ನೀವು ಹೇಳಿಕಳಿಸಿದ್ದರೆ ನಾನೆ ಬಂದಬಿಡತಿದ್ದನಣ್ಣಾ...

**Shankar**: Please excuse Anna… I would come to your place if you had just sent me a word.

**ಹರೀಶ್ ಗೌಡ**: ನೀವೇನು ನಮ್ಮನೆಗೆ ಬರತೀರಾ ಸರ್; ನಿಮ್ಮ ಮನೆಗೆ ನಾವು ಬರಬೇಕಾಗುತ್ತೆ ಪ್ರತಿದಿನ ನೀನು ಬಾರ್‌ನಲ್ಲಿ ಕೂತುಕೊಂಡಿರತೀಯಾ ಅದಕ್ಕೆ ನೀನು ನಿಮ್ಮ ಮನೆಗಾದ್ರು ಬರತೀರಾ ಅಂತ ನೋಡೋಕೆ ಬಂದಿದೀನಿ ಎಂದು ವ್ಯಂಗವಾಗಿ ಶಂಕರನನ್ನು ನೋಡಿದ

**Harish Gowda**: Come on … Will you come to my place? Surely you go to the bar every day. I know will be here and hence have come.

**ಶಂಕರ್**: ಅಣ್ಣ ಒಂದೇ ಒಂದು ತಿಂಗಳು ಟೈಮ್ ಕೊಡಿ ನಾನು ನಿಮ್ಮ ಅಸಲು ಬಡ್ಡಿ ಎಲ್ಲಾ ಸೇರಿಸಿ ಕೊಟ್ಟುಬಿಡತೀನಿ ಎಂದು ಅಂಗಲಾಚಿದ

**Shankar**: Just give me a month's time anna. I will repay the principal and the interest. (Shankar begs)

**ಹರೀಶ್ ಗೌಡ:** ಲೇ ಎಂತೋನ್ಲೆ ನೀನು ಇನ್ನಾ ಒಂದು ತಿಂಗಳು ಟೈಮ್ ಕೇಳ್ತಿದೀಯಾ? ನೋಡೋ ನಿನ್ನ ಹೆಂಡತಿನ ನೋಡು ಇಂತವ್ನ ಕಟ್ಟುಕೊಂಡಿದೀನಿ ಅಂತ ಎಷ್ಟು ಚಿಂತೆ ಮಾಡತಾ ಇದ್ದಾರೆ ಜವಾಬುದಾರಿ ಇಲ್ಲದವನೆ; ಹೆಂಡತಿ ಮತ್ತು ಮಗನನ್ನು ಹೇಗೋ ಸಾಕತೀಯಾ?

*ಶಂಕರ್ ಹಾಗೆ ಸುಮ್ಮನೆ ನಿಂತುಕೊಂಡಿದ್ದನು; ಹೂವಿನ ಬುಟ್ಟಿಯು ಕೆಳಗೆ ಇತ್ತು; ಶಂಕರನು ಆಕಡೆ ಈಕಡೆ ನೋಡುತ್ತಿದ್ದನು*

**Harish Gowda**: You are asking for one more month time? Look at your wife, cursed with a irresponsible husband like you. How are you going to feed your wife and son?

*Shankar stands silent looking at the flower basket.*

*Harish Gowda speaks out admonishingly.*

**ಹರೀಶ್ ಗೌಡ**: ನೋಡೋ ನನಗೆ ಎರಡು ವಾರದಲ್ಲಿ ಅಸಲು ತಂದು ಕೊಡಬೇಕು ಅಷ್ಟೆ ಕೊಡಲಿಲ್ಲ ಅಂದರೆ ನಿನ್ನನ್ನು ನಿನ್ನ ಫ್ಯಾಮಿಲೀನು ಮನೆಯಿಂದ ಹೊರಗೆ ಹಾಕತೀನಿ..

*ಹರೀಶ್ ಗೌಡನು ಚಿಟಿಕಿ ಹೊಡೆಯುತ್ತಾ ಎಲ್ಲಾರನೂ ಮನೆಯಿಂದ ಆಚೆ ಹಾಕತೀನಿ ಅಷ್ಟೆ …ಹರೀಶ್ ಗೌಡ ತನ್ನ ಹುಡುಗರ ಹತ್ತಿರ ತಿರುಗಿಕೊಂಡು ಬನ್ರೋ ಅಂತ ನಡೆದನು*

*ಶಂಕರ್ ಹೂವಿನ ಬುಟ್ಟಿಯನ್ನು ಎತ್ತಿಕೊಂಡು ಹಿಂದೆ ತಿರುಗಿ ನೋಡಿ ನಡೆದುಕೊಂಡು ಮುಂದೆ ಹೋಗುತ್ತಾನೆ; ಕ್ಯಾಮರಾದಲ್ಲಿ ವಿಜಯಲಕ್ಷ್ಮಿಯು ಮನೆಯ ಬಾಗಿಲಿನ ಹತ್ತಿರ ನಿಂತು ಆಚೆ ನೋಡುವುದು ಕಾಣುತ್ತದೆ.*

**Harish Gowda**: Hey… you listen. You have to return the amount with the interest in two weeks' time failing which you will be thrown out of this house with your family.

*(Harish Gowda leaves the scene with his men repeating his warning that he will throw everyone out)*

*Shankar leaves with the flower basket looking back at his house and his family*.

(Camera portrays Vijaylakshmi standing at the entrance of the house)

***

*ಸೀನ್ 6: ಸಂಜೆ ಮನೆಯ ಒಳಗೆ ಅದೇ ದಿನ; ವಿಜಯಲಕ್ಷ್ಮಿ ಮನೆಯಲ್ಲಿ ಹೂವನ್ನು ಕಟ್ಟುವ ದೃಶ್ಯ;*

Scene 6: Evening of the same day; Vijayalakshmi preparing garlands for the next day

*'ಅಪ್ಪ ಬಂದರು ಅಪ್ಪ ಬಂದರು' ಎಂದು ಹೋಡುತ್ತಾ ಮನೆಗೆ ಬಂದನು ಹಿಂದಯೇ ಶಂಕರನು ಇದ್ದನು(ಶಂಕರನ ಶರ್ಟ್ ಕೊಳೆಯಾಗಿರುತ್ತದೆ) ; ವಿಜಯಲಕ್ಷ್ಮಿ ಹೂವು ಕಟ್ಟುವುದನ್ನು ನಿಲ್ಲಿಸಿ ಸೆರಗಿಗೆ ಕೈಯನ್ನು ಒರೆಸುತ್ತಾ ಸೆರಗನ್ನು ಸೊಂಟಕ್ಕೆ*

*ಸಿಕ್ಕಿಸುತ್ತಾಳೆ; ಮಗನು ಅಮ್ಮನಿಗೆ 'ಅಮ್ಮ ಅಪ್ಪ ಬಂದರು, ಅಪ್ಪ ಬಂದರು' ಎಂದು ಮತ್ತೊಮ್ಮೆ ಹೇಳಿದನು; ವಿಜಯಲಕ್ಷ್ಮಿ ತನ್ನ ಮಗನ ಕೆನ್ನೆಯನ್ನು ಚಿವುಟಿದಳು*

**ವಿಜಯಲಕ್ಷ್ಮಿ:** ಗೊತ್ತಾಯತು ಕಣೋ ಯಾಕೋ ಅಷ್ಟೋಂದ ಕಿರಚುತ್ತೀಯಾ? ಎಂದು ನಗುತ್ತಾ ನಗುತ್ತಾ ಹೇಳಿದಳು; ಸರಿ ಆಟ ಆಡಕೋ ಹೋಗು

*ಮಗು ಆಟ ಆಡಲು ಆಚೆ ಹೋಡಿ ಹೋಯಿತು*

*Shankar comes home and the child cheers the arrival of his father reported that his dad is back home. Vijayalakshmi admiringly pinched his chin.*

**Vijayalakshmi:** I too am aware of it. Why are you screaming? Go out and play.

*The boy leaves the house to play.*

*ವಿಜಯಲಕ್ಷ್ಮಿ ಅಡುಗೆ ಮನೆಗೆ ಹೋಗಿ ಸ್ಟೌವನ್ನು ಅಂಟಿಸಿದಳು ನಂತರ ಪಾತ್ರೆಯನ್ನು ತೆಗೆದು ಸ್ಟೌವಿನ ಮೇಲೆ ಇಟ್ಟಳು...*

*Vijayalakshmi gets to the kitchen, places a vessel on the stove, lights up the stove.*

**ವಿಜಯಲಕ್ಷ್ಮಿ**: ಏನಿವುತ್ತು ಬೇಗ ಬಂದಿದೀರಾ... ಅಯ್ಯೋ ನೋಡ್ರಿ ನಾನು ಪ್ರಶ್ನೆ ಮೇಲೆ ಪ್ರಶ್ನೆ ಕೇಳತೀನಿ..ಹೋಗಿ ಕೈ ತೊಳೆದು ಕೊಂಡು ಬನ್ನಿ ನಿಮಗೆ ಇಷ್ಟವಾಗೋ ಬಸ್ಸಾರು ಮಾಡಿದೀನಿ... ಊಟ ಮಾಡ್ವರಂತೆ...

*ವಿಜಯಲಕ್ಷ್ಮಿಯು ಆಸಕ್ತಿಯಿಂದ ಊಟಕ್ಕೆ ಅಣಿ ಮಾಡಿದಳು; ಅನ್ನ, ಸಾರು; ಉಪ್ಪಿನಕಾಯಿ; ತಟ್ಟೆ ಲೋಟ ಎಲ್ಲವನ್ನು ಖುಷಿ ಖುಷಿಯಾಗಿ ಇಟ್ಟಳು*

***Vijayalakshm**i: How come you are back home so early? Well I have so many queries for you but first get freshen and come for dinner. I have prepared your favorite Bassaru today.*

**ಶಂಕರ್**: ಶಂಕರ್ ತನ್ನ ಶರ್ಟ್‌ನ್ನು ಬಿಚ್ಚುತ್ತಾ,

**ಶಂಕರ್**: ನೆನ್ನೆ ಮನೋಜ್ ಸಿಕ್ಕಿದ್ದ; ಅವನು ಹೇಳಿದ... ಗೌರ್ ಮೆಂಟಿನಿಂದ ಏನೋ ಸ್ಕೀಮ್ ಮಾಡಿದಾರಂತೆ,,; ಆ ಸ್ಕೀಮಿನಲ್ಲಿ ಹೆಂಗಸರೆಲ್ಲಾ ಬಸ್ಸಿನಲ್ಲಿ ಎಲ್ಲಾ ಕಡೆ ಹೋಡಾಡಬೋದಂತೆ ಅದೂ ಫ್ರೀಯಾಗಿ; ಅದಕ್ಕೆ ನಾನು ಒಂದು ನಿರ್ಧಾರಕ್ಕೆ ಬಂದಿದೀನಿ...

*ಇಷ್ಟೆಲ್ಲ ಗಂಡನು ಮಾತನಾಡುತ್ತಾ ಇರುವಾಗ ಕೆಲಸವನ್ನು ಮಾಡುತ್ತಾ ಕೇಳಿಸಿಕೊಳ್ಳುತ್ತಿದ್ದಳು (ಗಂಡ ಮನೆಗೆ ಬೇಗ ಬಂದ ಖುಷಿ ಮುಖದಲ್ಲಿ ಎದ್ದು ಕಾಣುತ್ತಿತ್ತು)*

*Vijayalakshmi arranges the plates, tumbler, rice samber, pickle in enthusiastically. Shankar, takes off his shirt.*

**Shankar**: I met Manoj yesterday and got to know that the government have come up with a scheme where all ladies can commute in government buses for free. So, I have come to a decision.

*Vijayalakshmi listens to all this doing the job of preparation to serve his husband his favorite food (The joy of his husband coming home early is seen on her face)*

**ವಿಜಯಲಕ್ಷ್ಮಿ**: ಏನು ನಿರ್ಧಾರ?

*ಶಂಕರ್‌ಬಂದು ಊಟಕ್ಕೆ ಕುಳಿತು ಅನ್ನವನ್ನು ಬಡಿಸಿಕೊಂಡ*

**Vijayalakshmi**: What decision?

*Shankar comes and sits for dinner and helps himself serving rice.*

**ಶಂಕರ್**: ನಾಳೆಯಿಂದ ನೀನು ಹೂವ ಎತ್ತಿಕೊಂಡು ಮಾರ್ಕೆಟ್‌ಗೆ ಹೋಗು... ಹೂವ ಮಾರೋ ಜವಾಬುದಾರಿ ಎಲ್ಲಾ ನಿಂದು...ನಾನು ಮನೆಯಲ್ಲಿಯೇ ಇದ್ದು ಏನೇನು ಕೆಲಸ ಇದೆಯೋ ಅದನ್ನು ನಾನು ಮಾಡತೀನಿ ಎಂದು ಸಾರನ್ನು ಬಡಿಸಿಕೊಳ್ಳುತ್ತಾ ಹೇಳಿದ...

**Shankar**: From tomorrow, you go to the market selling the flowers will be your job and I will manage all the chores at home.

*(Shankar serves himself sambar)*

*((ಮನೆಯಲ್ಲಿ ಸೀನ್ 1 ರಲ್ಲಿ ಶಂಕರ್ ಬುಟ್ಟಿಯಲ್ಲಿ ಹೂವು ಎತ್ತಿ ಕೊಂಡು ಹೋಗುವಾಗ ವಿಜಯಲಕ್ಷ್ಮಿಯು ಬಾಗಿಲಿನಿಂದ ಆಚೆಗೆ ನೋಡುತ್ತಾ ಇರುವಾಗ ಇರುವ ಮೌನ ಕಂಡುಬರುತ್ತದೆ)); ಶಂಕರನು ಮಾತನಾಡುತ್ತಾ ಇರುತ್ತಾನೆ; ... ಮೌನವು ನಿರಂತರವಾಗಿ ಇರುತ್ತದೆ ...ಆದರೆ ಇದ್ದಕ್ಕಿದ್ದಂತೆ ಮೌನವು ಶಂಕರನ ಮುಂದೆ ಬರುವ ಮಾತಿನಿಂದ ಬ್ರೇಕ್ ಆಗುತ್ತದೆ.*

*(Recall of scene-1 of shankar leaving with the flower basket to the market and the silence of Vijaylakshmi)*

*The words of Shankar breaks the silence.*

**ಶಂಕರ್**: ಹೇಳಿದ್ದು ಕೇಳಿಸಿತಾ...

**Shankar**: Are you listening?

**ವಿಜಯಲಕ್ಷ್ಮಿ**: ಏನು(ಆಸಕ್ತಿ)

**Vijayalakshmi**: What? (With curiosity)

**ಶಂಕರ್**: ಪ್ರತಿ ವಾರ ನೀನು ದುಡಿಯೋ ದುಡ್ಡು; ಲಾಭ; ನಷ್ಟ; ಎಲ್ಲನೂ ಒಂದೂ ಬಿಡದೆ ಹೇಳಬೇಕು; ಅಂದರೆ ಬಸ್ಸಿನ ಪ್ರಯಾಣದಿಂದ ಉಳಿಸಿದ ಹಣ; ಹೂವು ಕೊಂಡುಕೊಳ್ಳುವಾಗ ಖರ್ಚಾದ ಹಣ; ಹೂವು ಮಾರುವಾಗ ಬಂದ ಹಣ ಯವುದನ್ನೂ ತಪ್ಪದೆ ಲೆಕ್ಕ ಕೊಡಬೇಕು...ಅರ್ಥ ಆಯಿತಾ...

*ಶಂಕರನು ಊಟ ಮಾಡುವುದು ಸಾಗುತ್ತದೆ. ಕ್ಯಾಮರವು ವಿಜಯಲಕ್ಷ್ಮಿಯ ಹತ್ತಿರ ನಿದಾನಕ್ಕೆ ಹೋಗುತ್ತದೆ. ವಿಜಯಲಕ್ಷ್ಮಿಯು ಕಣ್ಣು ಮುಚ್ಚುತ್ತಾಳೆ; ಕಣ್ಣು ತೆಗೆದಾಗ ವಿಜಯಲಕ್ಷ್ಮಿಯು ಮಾರ್ಕೆಟ್‌ನಲ್ಲಿ ಇರುತ್ತಾಳೆ.*

**Shankar**: You should let me know the money earned every week. You should report the profit and loss, the expenditure of buying the flowers and revenue of selling them and also the amount saved by commuting in the government bus. Got it?

*(Shankar continues with the dinner. Camera slowly moves towards Vijayalakshmi. Vijayalakshmi closes her eyes and finds herself in the flower market on opening her eyes)*

***

ಸೀನ್ 7: ಮರುದಿನ, ಮಾರ್ಕೆಟ್ (ಸೀನ್ 6 ರ ಮುಂದುವರಿಕೆ – ವಿಜಯಲಕ್ಷ್ಮಿಯು ದರಿಸಿದ ವಸ್ತ್ರ ಮುಂದುವರಿಕೆ)

Scene 7: Continuation of scene – 6 (Vijaylakshmi wears the same dress of scene -6)

ಮಾರ್ಕೆಟ್‌ನಲ್ಲಿ ಹೂವಿನ ಮಾರಾಟದ ಭರಾಟೆ ಸದ್ದು – ಮಾರು 100 ರುಪಾಯಿ; ಬನ್ನಿ ಸ್ವಾಮಿ ; ತಗೋಳ್ಳಿ ; ತಾಜಾ ತಾಜಾ ಹೂವು; ಕಲರ್ ಕಲರ್ ಹೂವು; ತಗೊಳ್ಳಿ ಕನಕಾಂಬರ ಮೊಳಕ್ಕೆ ಬರೀ 50 ರುಪಾಯಿ; ಬನ್ನಿ ಸ್ವಾಮಿ; ಬನ್ನಿ ಮೇಡಮ್ಮ; ಬನ್ನಿ ಅಕ್ಕ –ಅಣ್ಣ......

*Chaotic noise of flower vendors calling and luring customers:*

*Come sir, come madam just Rs 100/meter. Hurry up… Buy this fresh and colourful flowers. Have this kanakambara flower just for Rs 50/ yard. Come anna…come akka…*

ಮಾರ್ಕೆಟ್‌ನಲ್ಲಿ ಹೂವಿನ ವ್ಯಾಪಾರಕ್ಕೆ ಕೂತುಕೊಂಡ ವಿಜಯಲಕ್ಷ್ಮಿಯು ಭಯದಿಂದ ಆಕಡೆ ಈಕಡೆ ನೋಡುತ್ತಿದ್ದಳು. ಆ ಕ್ಷಣದಲ್ಲಿ ಒಬ್ಬ ಹುವಿನ ವ್ಯಾಪಾರಿಯು ವಿಜಯಲಕ್ಷ್ಮಿಯ ಹೂವಿನ ಹತ್ತಿರ ಬರುತ್ತಾರೆ.

*Vijayalakshmi, being a novice to the environment settles down with her flowers and scarily looks around. A lady walks in*

**ಹೆಂಗಸು:** ಎಂಗಮ್ಮ ಸೇವಂತಿಗೆ ಹೂವು?

**Lady**: How much for this Seventhi flower?

**ವಿಜಯಲಕ್ಷ್ಮಿ:** 150 ರೂಪಾಯಿ ಮಾರಿಗೆ ಅಕ್ಕ.. . . . .

**Vijayalakshmi**: Rs 150 / meter akka

**ಹೆಂಗಸು:** ಬೇರೆ ಕಡೆಯಲ್ಲಾ 100 ರೂಪಾಯಿ ಮಾಡತಾ ಇದಾರೆ ನೀನು ಯಾಕಮ್ಮಾ ಅಷ್ಟೊಂದು ಹೇಳತೀಯಾ?

**Lady**: This is available at Rs 100 / meter. Why are you charging so much?

**ವಿಜಯಲಕ್ಷ್ಮಿ:** ಕ್ಷಮಸಕ್ಕ ನನಗೆ ಅಷ್ಟು ಗೊತ್ತಾಗಲಿಲ್ಲ...100 ರೂಪಾಯಿಗೇ ತೊಗಳ್ಳಕ್ಕ...

**Vijayalakshmi**: Sorry Akka, I don't know. Please pay Rs 100/m only.

**ಹೆಂಗಸು:** ಸೇವಂತಿಗೆ 100 ರೂಪಾಯಾ? ಪರವಾಗಿಲ್‌ವಲ್ಲ..(ಗೊಣಗುವಿಕೆ)......ಸರಿ ಒಂದು ಮಾರು ಸೇವಂತಿಗೆ ಕೊಡು

*ಎರಡು 50 ರೂಪಾಯಿ ನೋಟುಗಳನ್ನು ವಿಜಯಲಕ್ಷ್ಮಿಗೆ ಕೊಟ್ಟರು, ವಿಜಯಲಕ್ಷ್ಮಿಯು 100 ರೂಗಳನ್ನು ತೆಗೆದುಕೊಂಡು ತನ್ನ ಪರ್ಸಿಗೆ ಹಾಕಿ, ಹೂವನ್ನು ಒಂದು ಮಾರು ಅಳೆದು ವ್ಯಾಪಾರಿಗೆ ಕವರ್‌ನಲ್ಲಿ ಹಾಕಿ ಕೊಟ್ಟಳು...*

**Lady**: Rs 100 for Sevanthige? (murmurs expressing satisfaction for the cost)…okay…give me a meter of Sevanthige.

*(Recreation / mirroring)*

ಹೂವಿನ ಕೆಳಗಡೆ ಇದ್ದ ಬಟ್ಟೆಯ ಒಳಗಡೆ ಸ್ವಲ್ಪ ಕಾಯಿನ್‌ಗಳು ಕಂಡವು, ಮುಂಚೆ ಬಾಟಲ್ ಇದ್ದ ಕಡೆ ಗಣೇಶನ ಪುಟ್ಟ ಫೋಟೋ ಇತ್ತು... ವಿಜಯಲಕ್ಷ್ಮಿಯು 100 ರೂಪಾಯಿ ತೆಗೆದುಕೊಂಡು ಗಣೇಶನ ಫೋಟೋ ಮುಂದೆ ಇಟ್ಟು ಗಣೇಶನಿಗೆ ನಮಸ್ಕಾರ ಮಾಡಿದಳು...

*A few coins are seen beneath the fabric over which the flowers neatly arranged. A small photo of lord Ganesha is in the place which used to be the place of a bottle of alcohol.*

*Vijyalakshmi places the two Rs 50 notes at the photograph of lord Ganesha with devotion and prays.*

***

*ಸೀನ್ 8: ಅದೇದಿನ ಸಂಜೆ ; ಮನೆಯಲ್ಲಿ;*

Scene 8: Home; same day

*ವಿಜಯಲಕ್ಷ್ಮಿಯು ಸ್ವಲ್ಪ ಕಾಲಿಯಾದ ಹೂವಿನ ಮಕರಿಯನ್ನು ಇಟ್ಟುಳು, ಮಗುವು ಆಟವಾಡುತ್ತಿತ್ತು; ಗಂಡ ಶಂಕರ ಮಲಗಿದ್ದ; ವಿಜಯಲಕ್ಷ್ಮಿಯು ತನ್ನ ಬ್ಯಾಗನ್ನು ಇಟ್ಟು ಪೇಪರ್ ತೆಗೆದುಕೊಂಡು ಸೆಕೆಯನ್ನು ಬೀಸಿ ಅಡಿಗೆ ಮನೆ ಕಡೆ ಹೋಗಿ ಒಂಧು ತಟ್ಟೆಯನ್ನು ಎತ್ತಿಕೊಂಡು ಊಟಬಡಿಸಿಕೊಳ್ಳಲು ಪಾತ್ರೆಯನ್ನು ತೆಗೆದು ನೋಡಿದಳು… ಅಲ್ಲಿ ಏನೂ ಕಾಣಲಿಲ್ಲ… ಮಗುವಿನ ಕಡೆ ನೋಡಿ 'ಏನಾದರೂ ತಿಂದ್ಯ?' ಮಗುವು ಇಲ್ಲ ಎಂದು ತಲೆಯನ್ನು ಆಡಿಸಿತು… ವಿಜಯಲಕ್ಷ್ಮಿಯು ಮಲಗಿದ ಗಂಡನ ಕಡೆ ನೋಡಿದಳು… ಅವನ ಪಕ್ಕ ಕಾಲಿ ಪ್ಯಾಕೆಟ್ ಕಂಡುಬಂತು…*

*Vijayalakshmi returns home, places the empty flower basket and her bag in their place. The child is playing, and Shankar is sleeping. She then walks into the kitchen to satiate her hunger but finds nothing. She then checks with the child if he had anything. The child replies in the negative. Vijayalakshmi looks at Shankar and finds empty bottle by his side.*

***

*ಸೀನ್ 9: ಬೆಳಗ್ಗೆ; ಮನೆಯ ಒಳಗಡೆ;*

*Scene: Interior of the house; Vijayalakshmi is demonstrating how to prepare rice*

*ವಿಜಯಲಕ್ಷ್ಮಿ ಮತ್ತು ಶಂಕರನು ಅಡಿಗೆ ಕೋಣೆಯಲ್ಲಿ ಇದ್ದರು; ವಿಜಯಲಕ್ಷ್ಮಿಯು ಗಂಡನಿಗೆ ಅನ್ನವನ್ನು ಮಾಡುವ ವಿಧಾನವನ್ನು ತೋರಿಸಿಕೊಡುತ್ತಿದ್ದಳು; ಕುಕ್ಕರ್‌ನಲ್ಲಿ ಅಕ್ಕಿ ಹಾಕಿ ಚೆನ್ನಾಗಿ ತೊಳೆದು, ಅದಕ್ಕೆ ಅಳತೆಗೆ ತಕ್ಕಂತೆ ನೀರನ್ನು ಹಾಕೆ ಗಂಡನಿಗೆ ಅನ್ನಮಾಡುವ ವಿದಾನವನ್ನು ವಿವರಿಸುತ್ತಾ ಸ್ಟೌ ಮೇಲೆ ಕುಕ್ಕರ್‌ನ್ನು ಇಟ್ಟಳು…*

*Vijayalakshmi washes the rice well, adds right measure of water, places the cooker on the stove exploring the procedure of preparing rice.*

**ವಿಜಯಲಕ್ಷ್ಮಿ**: ಎರಡು ವಿಷಲ್ ಆದಮೇಲೆ ಸ್ಟೌ ಆಫ್ ಮಾಡಿ; ನಾನು ಬಂದೆ

Vijayalakshmi:- Just switch off the stove after two whistles. I will be back.

*ಎಂದು ಅಲ್ಲಿಂದ ಹೊರಟಳು…ಶಂಕರನು ನಿದಾನಕ್ಕೆ ಅಡಿಗೆ ಮನೆಯಿಂದ ಆಚೆ ಬಂದು ಅಲ್ಲಿ ಇಲ್ಲಿ ನೋಡಿ ಬ್ಯಾಗ್‌ಗಳನ್ನು ತಗಲು ಹಾಕಿರುವ ಕಡೆ ಬಂದನು/ ಸಾಮಾನುಗಳನ್ನು ಇಡುವ ಡಬ್ಬದಲ್ಲಿಯೂ ಸಹ ದುಡ್ಡನ್ನು ಹುಡುಕುವ ದೃಶ್ಯ (depends on the location).. ವಿಜಯಲಕ್ಷ್ಮಿಯ ಬ್ಯಾಗಿನಲ್ಲಿ ಕೈ ಹಾಕಿ ದುಡ್ಡನ್ನು ಎತ್ತಿಕೊಂಡನು…ದುಡ್ಡನ್ನು ಎಣಿಸುತ್ತಾ ಹಿಂದೆ ತಿರುಗಿ ನೋಡಿದಾಗ ವಿಜಯಲಕ್ಷ್ಮಿಯು ನಿಂತಿರುತ್ತಾಳೆ; ಶಂಕರ್ ಮತ್ತು ವಿಜಯಲಕ್ಷ್ಮಿ ಇಬ್ಬರು ಒಬ್ಬರಿಗೊಬ್ಬರು ನೋಡಿಕೊಂಡರು;*

*ವಿಜಯಲಕ್ಷ್ಮಿಯು ಹಣದ ಕಡೆ ನೋಡಿ ನಂತರ ಶಂಕರಿನಿಗೆ ನಿಮ್ಮ ಮುಂದೆ ತಗಲು ಹಾಕಿರುವ ಸೀರೆ ಮತ್ತು ಟವಲ್‌ಅನ್ನು ಕೊಡಿ ಎಂದಳು; ಶಂಕರನು ಸೀರೆ ಮತ್ತು ಟವಲ್‌ಅನ್ನು ವಿಜಯಲಿಕ್ಷ್ಮಿಗೆ ಕೊಟ್ಟನು, ಅವಗಳನ್ನು ವಿಜಯಲಕ್ಷ್ಮಿಯು ತನ್ನ ಹೆಗಲಮೇಲೆ ಹಾಕಿಕೊಂಡು ಹೊರಟಳು; ಶಂಕರನು ಹೆಂಡತಿಯ ಕಡೆ ನೋಡುತ್ತಾ ನಿಂತನು...*

*Vijayalakshmi leaves. Shankar leisurely looks around and eventually checks the bags hang over there and also checks the containers for cash kept if any and finally finds cash in one of bag of Vijayalakshmi and count the case and finds vijayalskshmi staring at him. Not getting perturbed by the act of Shankar. Vijayalakshmi asks to pass on the saree and towel over there and walks off. Shankar just looks at Vijayalakshmi awestruck.*

***

*ಸೀನ್ 10: ಮದ್ವಾಹ್ನ; ರೋಡಿನಲ್ಲಿ (ವಿಜಯಲಕ್ಷ್ಮಿಯು ತನ್ನ ಗಂಡನು ಕೊಟ್ಟ ಸೀರೆಯನ್ನೇ ಹುಟ್ಟಿಕೊಂಡಿದ್ದಳು...*

Scene 10: Afternoon, Street (Vijayalakshmi wearing the same saree which shankar had given to her)

*ಹರೀಶ್‌ಗೌಡ ಮತ್ತು ಹುಡುಗರು ನಿಂತಿದ್ದರು; ವಿಜಯಲಕ್ಷ್ಮಿಯು ಸೆರಗನ್ನು ಹೊದ್ದುಕೊಂಡು ಅವರ ಹತ್ತಿರ ಬರುತ್ತಾಳೆ; ವಿಜಯಲಕ್ಷ್ಮಿಯನ್ನು ನೋಡಿ ಹರೀಶ್‌ಗೌಡನು ತನ್ನ ಹುಡುರಿಗೆ ಸುಮ್ಮನೆ ಇರಲು ತಿಳಿಸಿ ವಿಜಯಲಕ್ಷ್ಮಿಯ ಕಡೆಗೆ ನೋಡಿದನು;*

*Harish Gowda with his boys on the street. Harish Gowda advises his boys to stay silent and behave properly as Vijayalakshmi approaches Harish Gowda covering herself well with her saree pallu.*

**ಹರೀಶ್‌ಗೌಡ**: ಏನಮ್ಮ ನೀನು ಇಲ್ಲಿ?

*ವಿಜಯಲಕ್ಷ್ಮಿ ಪರ್ಸ್‌ನ್ನು ತೆಗೆದು ದುಡ್ಡನ್ನು ತೆಗೆದು ಹರೀಶ್‌ಗೌಡನಿಗೆ ಕೊಟ್ಟಳು.*

*ಹರೀಶ್‌ಗೌಡ ಆಶ್ಚರ್ಯದೊಂದಿಗೆ 'ಏನಮ್ಮಾ ಇದು' ಎಂದು ಕೇಳಿದ.*

**Harish Gowda**: How come you here? What is that?

*(Vijayalakshmi hands over the cash in her purse to Harish Gowda)*

**ವಿಜಯಲಕ್ಷ್ಮಿ**: ಅಣ್ಣ ಇವರು ಸಾಲ ತಗೊಂಡಿದ್ದರಲ್ಲ...ಅದರ ದುಡ್ಡು ಇದು...ಇನ್ನು ಎರಡು ವಾರದಲ್ಲಿ ಬಡ್ಡಿ ಸಮೇತ ಮಿಕ್ಕ ಹಣವನ್ನು ಕೊಡುತ್ತೇನೆ

**Vijayalakshmi**: This the loan amount my husband had barrowed from you Anna. I will return the balance loan amount and the interest in two weeks time.

**ಹರೀಶಗೌಡ**: ಅಲ್ಲಮ್ಮ ನೀನ್ಯಾಕೆ ದುಡ್ಡು ತಂದಿದೀಯ? ಎಲ್ಲಿ ನಿನ್ನ ಗಂಡ?

*ವಿಜಯಲಕ್ಷ್ಮಿಯು ಕಳಗಡೆ ನೋಡುತ್ತಾ, ಹಿಂಜರಿಕೆಯಿಂದ ಕೈಯನ್ನು ಹಿಸುಕುತ್ತಾ...*

**Harish Gowda**: But why did you come for this and where is your husband?

(Vijayalakshmi hesitantly answers looking down)

**ವಿಜಯಲಕ್ಷ್ಮಿ**: ಏನಿಲ್ಲ ಅಣ್ಣ ಅವರು ಕೆಲಸಕ್ಕೆ ಹೋಗಿದ್ದಾರೆ; ಈ ನಡುವೆ ಅವರು ತುಂಬಾ ಜಾಸ್ತಿನೇ ಕೆಲಸ ಮಾಡತಾ ಇದಾರೆ...ಅವರಿಗೆ ಟೈಮ್ ಇಲ್ಲದೇಇರೋದರಿಂದ ನಾನೆ ದುಡ್ಡು ಕೊಡಲು ಬಂದೆ

**Vijayalakshmi:** Nothing Anna, He is our for work and he has too much of work these days and has no time. So, I came myself.

**ಹರೀಶ್‌ಗೌಡ**: ಹೌದಾ... ಸರಿ ಆಯ್ತು ಹೊರಡಮ್ಮ ನೀನು ಎಂದು ವಿಜಯಲಕ್ಷ್ಮಿಯನ್ನು ಕಳುಹಿಸಿದನು.

**Harish Gowda**: Is it? Fine. Okay you may take a leave

***

*ಸೀನ್ 12: ಸ್ವಲ್ಪ ದಿನದ ನಂತರ, ಬೆಳಗ್ಗೆ ಮಾರುಕಟ್ಟೆಯಲ್ಲಿ ಹೂವು ಮಾರುವ ದೃಶ್ಯ (ಹಿನ್ನಲೆ ಸಂಗೀತ: (ವಿಜಯಲಕ್ಷ್ಮಿ: ಬನ್ನಿ ಅಣ್ಣ ಹೂವ ತೊಗೊಳ್ಳಿ, ಸೇವಂತಿಗೆ, ಕನಕಾಂಬರ, ಮಲ್ಲಿಗೆ... ಅಕ್ಕ ಬನ್ನಿ ಅಕ್ಕ, ಬಾಪ್ಪ ತಮ್ಮ ಹೂವು ತೊಗೋ... ಹೂವನ್ನು ದೇವರಿಗೆ, ಮನೆಗೆ ತೊಗೊಳ್ಳಿ...ಬಾಪ್ಪ ತಮ್ಮ ಹೂವು ತಗೊಂಡು ದೇವರಿಗೆ ಹಾಕು ನೀನು ಪರೀಕ್ಷೆಯಲ್ಲಿ ಪಾಸಾಗತೀಯ...)(ಲವಲವಿಕೆ), ವಿಜಯಲಕ್ಷ್ಮಿಯ ಹತ್ತಿರ ಜನರು ಹೂವು ತಗೊಂಡು ದುಡ್ಡು ಕೊಡುತ್ತಿರುತ್ತಾರೆ...ವಿಜಯಲಕ್ಷ್ಮಿಯು ದುಡ್ಡನ್ನು ಎಣಿಸುವ ದೃಶ್ಯ..*

*ಸೀನ್ 7 ರಲ್ಲಿ ಬಂದ ಅದೇ ಹೆಂಗಸು ವಿಜಯಲಕ್ಷ್ಮಿಯ ಹತ್ತಿರ ಮಾತನಾಡಲು ಬಂದಿದ್ದಾರೆ.*

Scene 12: Afternoon; a few days

Location: Flower market

*Back ground sound: Vijayalakshmi calling people to buy the flowers from her… come brother… have this jasmine, Kanakambara, Sevanthi, ...(Says joyfully). Hay you, offer this to god..surely you will pass in exams…*

*(People are buying from Vijayalakshmi and Vijayalakshmi is very happy with her job)*

**ಹೆಂಗಸು**: ಏನಮ್ಮ ವಿಜಯಲಕ್ಷ್ಮಿ, ಏನು ಸಮಾಚಾರ?

Lady: Hi Vijayalashmi, how are you?

*Vijayalashmi is excited.*

**ವಿಜಯಲಕ್ಷ್ಮಿ:** ಹೋ ಅಕ್ಕ, ಬನ್ನಿ ಬನ್ನಿ... ನಿಮ್ಮ ಮಗ ಅಮೇರಿಕಾದಿಂದ ಬಂದರಾ?

Vijayalakshmi: Oh Akka come…come… has your son come back from America?

**ಹೆಂಗಸು**: ಹೂ ಇನ್ನೆರಡು ದಿನದಲ್ಲಿ ಅವನು ಬರತಾನೆ...ಅದಕ್ಕೆ ಮನೆಯಲ್ಲಿ ಒಂದು ಚಿಕ್ಕ ಪೂಜೆ ಇಟ್ಟಕೊಂಡಿದ್ದೀವಮ್ಮಾ...ಅದಕ್ಕೆ ಹೂ ತೊಗೊಳೋಕೆ ಬಂದಿದೀನಿ. ಇವತ್ತು ನನಗೆ ಬೇಕಾದ ಹೂವುಗಳೆಲ್ಲವನ್ನು ಹೇಳತೀನಿ. ನಾಡಿದ್ದಷ್ಟೊತ್ತಿಗೆ ಅದನ್ನು ರೆಡಿ ಮಾಡಿಡು.. ಮನೆಯಿಂದ ಯಾರಾದರೂ ಬಂದು ಹೂವ ತಗೊಂಡು ಹೋಗುತ್ತಾರೆ... ನಿನಗೆ ಆಗುತ್ತಾ?

Lady: Yeh… He is coming in two days and so we are having a small pooja at home. I will let you know all the flowers. I need for the day. Just make a note of it some one from our house will come and collect them. Is it okay?

**ವಿಜಯಲಕ್ಷ್ಮಿ:** ಹೂ ಅಕ್ಕ ನೀವು ಹೇಳಿದ ಹೂವುಗಳೆಲ್ಲವನ್ನು ರೆಡಿಮಾಡಿಡತೀನಿ.

Vijayalakshmi: Sure Akka. I will keep everything ready as you say.

**ಹೆಂಗಸು:** ಸರಿಯಮ್ಮ... ನನಗೆ ಕನಕಾಂಬರ, ಜಾಜಿ, ಸೇವಂತಿಗೆ, ಮಲ್ಲಿಗೆ, ಕಾಕಡ ಐದು–ಐದು ಮಾರು ಬೇಕು. ಅದಕ್ಕೆ ಸ್ವಲ್ಪ ಅಡ್ವಾನ್ಸ್ ಸಹ ಕೊಡತೀನಿ.

Lady: Okay… I need Jasmin, kanakambara, jaaji, Sevanthige – each 5 'maaru'.

**ವಿಜಯಲಕ್ಷ್ಮಿ:** ಯೇ ಅಕ್ಕ ಅಡ್ವಾನ್ಸ್ ನಿಮ್ಮ ಹತ್ತರ ತೊಗೋಳೋಕೆ ಆಗುತ್ತಾ... ನಾನು ರೆಡಿಮಾಡಿಡತೀನಿ... ಮನೆಯಿಂದ ಯಾರನಾದರೂ ಕಳಸಕ್ಕ.. ಹೂ ಕೊಟ್ಟು ಕಳಿಸತೀನಿ...

Vijayalakshmi: No need of advance Akka. I will keep everything ready. Just send some one to collect.

*ಹೆಂಗಸು ನಗುತ್ತಾ ಹೊರಟರು, ವಿಜಯಲಕ್ಷ್ಮಿ ನೋಟು ಪುಸ್ತಕದಲ್ಲಿ ಯಾವ ಯಾವ ಹೂವು ಅಕ್ಕನಿಗೆ ಎಷ್ಟು ಬೇಕು ಎಂದು ಬರೆದುಕೊಳ್ಳುತ್ತಾಳೆ...ಅಷ್ಟೊತ್ತಿಗೆ ಮತ್ತೊಬ್ಬ ಹೂವು ಮಾರುವ ಅನಿತ ವಿಜಯಲಕ್ಷ್ಮಿಯ ಹತ್ತಿರ ಬಂದು,*

*(Vijayalakshmi makes a note of the requirement…Anita, a flower vendor arrives)*

**ಅನಿತಾ:** ಅಕ್ಕ ಬಾ ಅಕ್ಕ ಕಾಫಿ ಕುಡಿಯೋಕೆ ಹೋಗೋಣ...

Anita: Come Akka, let us go for a coffee

**ವಿಜಯಲಕ್ಷ್ಮಿ:** ಈಗ ಬೇಡ ಅನಿತಕ್ಕಾ ಈ ಟೈಮನಲ್ಲಿ ಜನ ಜಾಸ್ತಿ ಬರತಾರೆ...ಆಮೇಲೆ ಹೋಗೋಣ

Vijayalakshmi Not now Anitha. This is the time of more customers footfall. Let us go later.

*ಎಂದು ಹೂವನ್ನು ಕೊಂಡುಕೊಳ್ಳುವಂತೆ ಎಲ್ಲರನ್ನೂ ಕರೆಯಲು ಪ್ರಾರಂಬಿಸಿದಳು...*

*(Vijayalakshmi gets busy calling customers)*

***

*ಸೀನ್ 13: ಬೆಳಗ್ಗೆ; ಮನೆಯಲ್ಲಿ; ಕಳಗಡೆ ವಿಜಯಲಕ್ಷ್ಮಿ ಮತ್ತು ಮಗು ಕೂತಿದ್ದರು, ಹೂವನ್ನು ಕಟ್ಟುವುದನ್ನು ಮಗನಿಗೆ ಹೇಳಿಕೊಡುತ್ತಿದ್ದಳು...ದಾರನ ಈ ರೀತಿ ಸುತ್ತಿ ಹೂವನ್ನು ಈ ರೀತಿ ಗಂಟು ಹಾಕಬೇಕು ಎಂದಳು;*

*ಮಗುವು ಅಮ್ಮನ ಕೈಯನ್ನು ನೊಡುತ್ತಾ ಅದೇ ರಿತಿ ಹೂವನ್ನು ಕಟ್ಟುತ್ತಾ ಇರುತ್ತಾನೆ...*

*ವಿಜಯಲಕ್ಷ್ಮಿಯು ಮಗುವನ್ನು ನೋಡಿ ತಲೆ ಸವರುತ್ತಾ...*

Scene 13: Time: Morning; home

Vijayalakshmi teaching her son the way of preparing a garland. The child attentively following her mother learning the skill.

**ವಿಜಯಲಕ್ಷ್ಮಿ:** ಹೇ ನಾನು ನಿನಗೆ ನಿನಗೆ ಒಂದು ಪ್ರಶ್ನೆ ಕೇಳಲಾ?

**Vijayalakshmi:** Hey… Shall I ask you something?

**ಮಗು:** ಕೇಳಮ್ಮ...

**Child**: Oh..Sure

**ವಿಜಯಲಕ್ಷ್ಮಿ**: ಈ ಹಾರ ಯಾಕೆ ಬ್ಯೂಟಿಫುಲ್ ಆಗಿ ಕಾಣುತ್ತೆ ಅಂತ ನಿನಗೆ ಗೊತ್ತಾ?

**Vijayalakshmi:** Do you know the reason why is this garland so nice?

**ಮಗು**: ಇನ್ನೇನು...ಹೂವದಿಂದ ಅದು ಬ್ಯೂಟಿಫುಲ್ ಆಗಿ ಕಾಣುತ್ತೆ ಅಲ್ವಾ?

*ವಿಜಯಲಕ್ಷ್ಮಿಯು ಹೂವಿನ ಹಾರವನ್ನು ಕೈಯಲ್ಲಿ ತೆಗೆದುಕೊಂಡು*

**Child**: Of course… It looks so nice because the flowers are beautiful

(*Vijayalakshmi takes a garland and looks at it thought fully)*

**ವಿಜಯಲಕ್ಷ್ಮಿ**: ನೀನು ಅಂದು ಕೊಂಡ ಹಾಗೆ ಎಲ್ಲರೂ ಹೂವು ಚೆನ್ನಾಗಿ ಇರೋದರಿಂದ ಹಾರ ಸುಂದರವಾಗಿ ಕಾಣುತ್ತೆ ಅಂತ ಅಂದಕೊಂಡಿದಾರೆ ಆದರೆ ಒಂದೇ ದಾರವು ಹೂವುಗಳೆಲ್ಲವನ್ನು ತನ್ನ ಗಂಟುಗಳ ಸಹಾಯದಿಂದ ಹಿಡಿದುಕೊಂಡು; ತನ್ನ ನೋವನ್ನು ತಾನೆ ನುಂಗುತ್ತಾ ಹೊರಗಿನ ಜಗತ್ತಿಗೆ ಹೂವಿನ ಹಾರವು ಸುಂದರವಾಗಿ ಕಾಣೋ ತರ ಮಾಡುತ್ತೆ...ಆದಕ್ಕೆ ದಾರವು ಹೂವಿನಹಾರ ಸುಂದರವಾಗಿ ಕಾಣಲು ದಾರನೇ ಕಾರಣ.......

***Vijayalakshmi**: All think the same as you do that, it is because of the flowers the garland is so beautiful. But it is the thread binding the individual flowers in apattern and sequence which makes the garland look nice and appealing. The thread bears all the pain of getting twisted and knotting to the hold the flowers in their place. So it is the thread which unites the flowers is the reason for the garland being beautiful*

*ಶಂಕರನು ಬಂದು ಅಲ್ಲಿ ನಿಂತನು*

(Shankar arrives at the scene)

**ಶಂಕರ್:** ಟೈಮ್ ಆಯತು ನೀನು ಹೊರಡು ಅವನಿಗೆ ನಾನು ಹೂವ ಕಟ್ಟೋದು ಹೇಳ್ಕೊಡತೀನಿ

*ವಿಜಯಲಕ್ಷ್ಮಿ ಎದ್ದು ನಿಂತು ಕನ್ನಡಿಯ ಮುಂದೆ ನಿಂತು ಕೂದಲನ್ನು ಸರಿಮಾಡಿಕೊಂಡು, ಮುಖಕ್ಕೆ ಪೌಡರನ್ನು ಹಚ್ಚಿ...ಸೀರೆಯನ್ನು ಸರಿಮಾಡಿಕೊಂಡಳು; ಅದಾದ ಮೇಲೆ ಬ್ಯಾಗಿಗೆ ಕೈ ಹಾಕಿ ಒಂದು 'ಬಾಟಲು' ಕೊಟ್ಟಳು...*

*ಶಂಕರನು ವಿಜಯಲಕ್ಷ್ಮಿಯ ಹಿಂದೆ ನಿಂತಿದ್ದನು. ಶಂಕರನು ಪ್ರೇಮಿನಿಂದ ಆಚೆ ಹೊರಟನು...ವಿಜಯಲಕ್ಷ್ಮಿ ಮಗನ ಕಡೆ ನೋಡುತ್ತಾ...*

**Shankar**: It is time now for you to leave. You carry on. I will teach him

*Vijayalakshmi gets herself in front of the mirror. Sets her saree applies a light coat of talcum powder on her face and combs her hair… hands over a bottle from her bag to shankar*

*Shankar who was standing behind Vijayalakshmi takes it and slowly gets off the frame.*

*Vijayalakshmi looks at her son and admonishingly.*

**ವಿಜಯಲಕ್ಷ್ಮಿ**: ನೀನು ಮನೆಯಲ್ಲಿ ಏನಿರುತ್ತೊ ಅದನ್ನು ತಿನ್ನು ಅದು ಬೇಕು ಇದು ಬೇಕು ಅಂತ ಅಪ್ಪನಿಗೆ ಕಾಡಿಸಬೇಡ...ಸ್ಕೂಲ್‌ನಲ್ಲಿ ಕೊಟ್ಟಿರುವ ಎಲ್ಲಾ ಹೋಂವರ್ಕ್ ಮಾಡಿ ಮುಗಿಸು (ದೃಢವಾಗಿ ಹೇಳುತ್ತಾಳೆ)

*ಶಂಕರನು ಹೂವಿನ ಬ್ಯಾಸ್ಕೆಟ್ ತಗೊಂಡು ವಿಜಯಲಕ್ಷ್ಮೀಯ ಕೈಯಲ್ಲಿ ಕೊಟ್ಟನು. ವಿಜಯಲಕ್ಷ್ಮಿ ಬ್ಯಾಗನ್ನು ತಗೊಂಡು ಶಂಕರನನ್ನು ನೋಡುತ್ತಾ ಹೊರಗೆ ನಡೆಯುತ್ತಾ ಹೋಗುತ್ತಾಳೆ...ಶಂಕರನು ಬಾಗಿಲಿನ ಮೇಲೆ ಕೈ ಹಾಕಿ ತಲೆಯನ್ನು ಬಾಗಿಲಿಗೆ ಒರಗಿಸುತ್ತಾ ತನ್ನ ಹೆಂಡತಿ ಹೋಗೋದನ್ನು ನೋಡುತ್ತಾ ಇರುತ್ತಾನೆ (Re-creation of scene 1): ನೀರಸ ಮೌನ...*

*ವಿಜಯಲಕ್ಷ್ಮಿ ನಡೆದುಕೊಂಡು ಬರುತ್ತಾ ಕ್ಯಾಮರಾವನ್ನು ನೋಡುತ್ತಾಳೆ...ಒಂದು ಕ್ಷಣ ಕ್ಯಾಮರಾದ ಕಡೆ ನೋಡಿ ಮುಗುಳ್ನಗೆ ನಗುತ್ತಾಳೆ...*

**Vijayalakshmi:** Just eat whatever is available at home and don't bother your father with your demands… and complete all your homework.

*Shankar hands over the flower basket to Vijayalakshmi and Vijayalakshmi walks off. Shankar leaving on the door frame sees Vijayalakshmi going out.*

*Vijayalakshmi slowly gets close to the camera and smiles.*

***